

ಎಡದಿಂದ ಬಲಕ್ಕೆ:

1. ಅಲ್ಲಿ ಭೂತಾರಾಧನೆಗೆ ಬಹಳ ಅಡ್ಡಿ ಇದೆ (4)
3. ದೇವರಿಂದಲೇ ಸೃಷ್ಟಿಯಾದದ್ದು ತಾನೇ ಕಡಲು ? (3)
4. ಮರದಲ್ಲೇ ಹಣ್ಣಾದದ್ದು, ಎಷ್ಟು ಸಿಹಿ ! (3)
6. ಕವಡೆಗಳ ಸಂಗ್ರಹಣಕ್ಕೆ ಅಲ್ಲಿ ಭಾರೀ ನಿಯಂತ್ರಣ ಇದೆ (4)
7. ಇಂಥ "ಕಾಡಿನ ರಾಜ" ಅಡಿಗೆಗೇ ಸರಿ (4)
8. ಹೊಸಬರಿಗೆ ರಂಜನೆ ನೀಡಲು ಬಂದ ನಗೆ ಕಲಾವಿದ (4)
10. ಬೇರಾವ ಮಾಯೆಯೂ ಇಲ್ಲ ಮೃತ್ಯು ದೇವತೆಯಂಥ ತೂಕ ! (4)
12. ಇದು ಪೂರ್ವಿಕರು ಬಳಸುತ್ತಿದ್ದ ಸಲಕರಣೆ (4)
14. ಕಲಿಯಲು ಕಷ್ಟ ಹೌದೇ ಮರ ಕೆತ್ತನೆಯ ವಿದ್ಯೆ ? (4)
16. ನಾಳಿನ ಪೂಜಾ ಕೆಲಸಕ್ಕೆ ತಂದದ್ದು ಈ ತಾವರೆ (3)
17. "ಬಿಳೀ ಹಕ್ಕಿ" ಹಿಂದು ಮುಂದು (3)
18. ಬಡಗಿಯ ಕೆಲಸದ ಅಂತಿಮ ಅಂಶ (4)

ಮೇಲಿಂದ ಕೆಳಕ್ಕೆ :

1. ಅಕ್ಷರಗಳ ಅಲಂಕಾರ ಬಹಳ ಹೆಚ್ಚಾಯಿತು (3)
2. ರಾವಣನನ್ನೇ ಹೋಲುವವ ಎಂಥ ಗಂಡ ! (3)
3. ವಾಚನಕ್ಕೆ ಅಧಿಪತಿ ಬ್ರಹ್ಮ ತಾನೇ ? (4)
5. ಅಲ್ಲಿನ ಸದಾ ಹಸಿರಿನ ಗುಟ್ಟು ಗೊತ್ತೇ ? (3)
7. ವಿಮಾನ ಪಯಣದಲ್ಲಿ ಕಂಡ ದೃಶ್ಯಗಳ ತುಂಬ ಬಣ್ಣವೋ ಬಣ್ಣ (4)
9. ಹತ್ತಿರದಿಂದ ನೋಡಿದ್ದು, ಅಮೂಲ್ಯ ಮಣಿ ಪೋಣಿಸಿದ ಭಾರೀ ಕಂಠಾಭರಣ (4)
11. ಭಜನೆಯ ಪುಣ್ಯ ಪ್ರಾಪ್ತಿಗೆ ಆತ ಪಾತ್ರನಾದ (3)
13. ಗೂಬೆಯನ್ನೇ ಹೋಲುವ ಕಪ್ಪು ಆಟಿಗೆ (4)
14. ಕೈಂಕರ್ಯದ ವಸ್ತು ಚಿನ್ನದಿಂದ ಮಾಡಿದ್ದು (3)
15. ಗಳಿಕೆಯನ್ನೆಲ್ಲ ದಾಖಲು ಮಾಡುವ ಗುಮಾಸ್ತ ಆತ (3)

**10-08-2017ರ ಉತ್ತರಗಳು**

ಎಡದಿಂದ ಬಲಕ್ಕೆ :

1. ಪ್ರತಾಪ 3. ಪ್ರಣಾಮ 4. ಹಣತೆ 6. ನಿರಂತರ 7. ಕಾರಕೂನ 9. ಮಹಾಲಯ 11. ಹೊಸತನ 15. ತೆರವು 16. ನಿರ್ಧಾರ 17. ಗೇಣಸು

ಮೇಲಿಂದ ಕೆಳಕ್ಕೆ :

1. ಪ್ರಮದೆ 2. ಪಹರೆ 3. ಪ್ರಪಾತ 5. ತೆಪರ 6. ನಿರ್ನಾಮ 8. ನಮನ 10. ಲಭ್ಯತೆ 12. ಸಮೀರ 13. ಹಾವುಗೆ 14. ಮುನಿಸು

# ಹಂಸ ಏಕೆ ಪ್ರಸಿದ್ಧ ?

**ಪ್ರಶ್ನಾ ಂಕಣ**

ಹಂಸ ಅದೊಂದು ಬಹು ಪ್ರಸಿದ್ಧ ಹಕ್ಕಿ. ವಾಸ್ತವದಲ್ಲಿ ಅತ್ಯಂತ ಸಾಮಾನ್ಯವಾದ ಬಾತು ಕೋಳಿಯ ನಿಕಟ ಸಂಬಂಧಿಯಾಗಿದ್ದರೂ ಹೇಗೋ ಏನೋ, ಹಂಸದ ಹೆಸರು ಜಗದಾದ್ಯಂತ ಪುರಾತನ ಕಾಲದಿಂದಲೇ ಪುರಾಣಗಳಲ್ಲೂ, ಮಿಥ್ಯಾ ಕಲ್ಪನೆಗಳಲ್ಲೂ, ಸಂಗೀತ ರಾಗಗಳಲ್ಲೂ (ಹಂಸಾನಾದ, ಹಂಸಧ್ವನಿ ಇತ್ಯಾದಿ) ಬಹು ವಿಧಗಳಲ್ಲಿ ಬೆರೆತು ಬಂದಿದೆ. ಹಾಗಾಗಿ ಹಂಸ ಭಾರೀ ಪ್ರಸಿದ್ಧಿಯನ್ನು ಪಡೆದಿದೆ. ಉದಾಹರಣೆಗೆ ಪರಮ ಹಂಸ ( ಅತ್ಯುನ್ನತ ಧಾರ್ಮಿಕ ಸ್ಥಾನ ತಲುಪಿದವರ ವಿಶೇಷ ಅಭಿಧಾನ), ರಾಜ ಹಂಸ (ವಿದ್ಯಾಧಿದೇವತೆ ಸರಸ್ವತಿಯ ವಾಹನ) ಇತ್ಯಾದಿ ಶ್ರೇಷ್ಠತಾ ಪದವಿಗಳು ಒಂದೆಡೆಯಾದರೆ ಹಂಸ ಕ್ಷೀರ ನ್ಯಾಯ (ಹಾಲು ನೀರು ಮಿಶ್ರಣದಲ್ಲಿ ಹಾಲನ್ನಷ್ಟೇ ಪ್ರತ್ಯೇಕಿಸಿ ಹೀರಬಲ್ಲ ಸಾಮರ್ಥ್ಯ), ಹಂಸ ಗೀತೆ (ಅಂತ್ಯ ಗಾನಕ್ಕೆ ಸಮಾನಾರ್ಥಕ), ಹಾಗೂ ಪರಮ ಸೌಂದರ್ಯದ ಲಕ್ಷಣಗಳಾಗಿ ಹಂಸ ವೇಣಿ, ಹಂಸ ನಡಿಗೆ ಇತ್ಯಾದಿ ಕಾಲ್ಪನಿಕ ಮಿಥ್ಯಾ ಪ್ರತಿಮೆಗಳು ಹಂಸಕ್ಕೆ ವಿಶೇಷ ಖ್ಯಾತಿಯನ್ನು ತಂದಿವೆ.

ಆದರೆ ಅದಾವುದರ ಪರಿವೆಯೂ ಇಲ್ಲದೆ ಹಂಸಗಳು ಬಾತು ಮತ್ತು ಹೆಬ್ಬಾತುಗಳ ಅನಾಟಿಡೇ ಕುಟುಂಬಕ್ಕೇ ಸೇರಿವೆ. ಒಟ್ಟು 146 ಪ್ರಭೇದಗಳಿರುವ ಈ ಕುಟುಂಬದಲ್ಲಿ ಹಂಸಗಳ ಆರು ಪ್ರಭೇದಗಳಿವೆ. ಯೂರೋಪ್ ಮತ್ತು ಏಷ್ಯಾಗಳ ಮೂಕ ಹಂಸ, ಆಸ್ಟ್ರೇಲಿಯಾದ ಕಪ್ಪು ಹಂಸ, ದಕ್ಷಿಣ ಅಮೆರಿಕದ ಕಪ್ಪು ಕತ್ತಿನ ಹಂಸ, ಯೂರೋಪ್ ನ ವ್ಹೂಪರ್ ಹಂಸ ಹಾಗೂ ಉತ್ತರ ಅಮೆರಿಕದ ಟ್ರಂಪೆಟರ್ ಹಂಸ ಮತ್ತು ತಂಡ್ರಾ ಹಂಸ. ಸ್ಪಷ್ಟವಾಗಿಯೇ, ಅಂಟಾರ್ಕ್ಟಿಕಾ ಮತ್ತು ಆಫ್ರಿಕಾ ಖಂಡಗಳಲ್ಲಿ ಹಂಸಗಳಿಲ್ಲ. ಮತ್ತೊಂದು ವಿಶೇಷ ಏನೆಂದರೆ, ಧರೆಯ ಉತ್ತರಾರ್ಧ ಗೋಳದಲ್ಲಿರುವ ಹಂಸ ಪ್ರಭೇದಗಳೆಲ್ಲದು ಪರಿಶುದ್ಧ ಬಿಳುಪಿನ ವರ್ಣ (ಚಿತ್ರಗಳಲ್ಲಿ ಗಮನಿಸಿ) ; ದಕ್ಷಿಣಾರ್ಧದ ಪ್ರಭೇದಗಳದು ಬಿಳಿ ಜೊತೆಗೆ ಕಪ್ಪು ವರ್ಣದ ಮಿಶ್ರಣ. ಕಪ್ಪು ಹಂಸದ್ದಂತೂ ಹೆಸರೇ ಸೂಚಿಸುವಂತೆ ಶರೀರವಿಡೀ ಕಡುಗಪ್ಪು ವರ್ಣ.




ಹಂಸಗಳದು ಭಾರೀ ಗಾತ್ರ. ಮೂಕ ಹಂಸ, ಟ್ರಂಪೆಟರ್ ಮತ್ತು ವ್ಹೂಪರ್ ಹಂಸಗಳದಂತೂ ಹಾರುತ್ತಿರುವಾಗ ಕೊಕ್ಕಿನ ತುದಿಯಿಂದ ಬಾಲದ ತುದಿವರೆಗೆ ಸಮೀಪ ಐದು ಅಡಿ ಉದ್ದ, ಹದಿನೈದು ಕಿಲೋ ತೂಕ, ಹತ್ತು ಅಡಿ ರೆಕ್ಕೆ ವಿಸ್ತಾರ. ಶುದ್ಧ ನೀರಿನ ವಿಶಾಲ ಸರೋವರಗಳು, ಮಂದ ಗಾಮಿನಿ ನದಿಗಳು ಮತ್ತು ಇಂಥ ಜಲಾವಾರಗಳ ದಂಡೆಗಳು ಈ ಹಕ್ಕಿಗಳ ನೆಲೆ. ಹಂಸಗಳದು ಮಿಶ್ರಾಹಾರ ಕ್ರಮ. ಜಲ ಸಸ್ಯಗಳು, ಕಾಳುಗಳು, ಹುಲ್ಲು ಗಿಡಗಳು, ಕಪ್ಪೆಗಳು, ಪುಟ್ಟ ಮೀನುಗಳು ಮತ್ತು ಕೀಟಗಳು ಅವುಗಳ ಆಹಾರ. ವಲಸೆ ಹೋಗುವ ಪರಿಪಾಠವನ್ನೂ ಹೊಂದಿರುವ ಈ ಹಕ್ಕಿಗಳಲ್ಲಿ ಒಮ್ಮೆ ಜೊತೆಯಾದ ಹೆಣ್ಣುಗಂಡುಗಳು ಜೀವನ ಪರ್ಯಂತ ಒಟ್ಟಾಗಿ ನಿಷ್ಠಾವಂತ ಬಾಳ ಸಂಗಾತಿಗಳಾಗಿ ಉಳಿಯುತ್ತವೆ. ಹೆಣ್ಣು ಗಂಡುಗಳೆರಡೂ ಒಟ್ಟಾಗಿ ನೀರಲ್ಲಿ ತೇಲುವ ಗೂಡು ನಿರ್ಮಿಸಿ, ಮೊಟ್ಟೆ ಇಟ್ಟು, ಕಾವು ಕೊಟ್ಟು, ಮರಿಮಾಡಿ, ರಕ್ಷಿಸಿ, ಪೋಷಿಸಿ, ಜೀವನ ಕೌಶಲ್ಯಗಳನ್ನೆಲ್ಲ ಕಲಿಸಿ ಪ್ರೌಢವಾದ ಮರಿಗಳನ್ನು ದೂರ ಕಳಿಸುತ್ತವೆ. ಹಂಸಗಳ ಸರಾಸರಿ ಜೀವಿತಾವಧಿ ಹತ್ತು ವರ್ಷ. ಅಷ್ಟರೊಳಗೇ ಮನುಷ್ಯ ಬೇಟೆಗಾರರಿಗೆ ಬಲಿಯಾಗುವ ಹಂಸಗಳೇ ಹೆಚ್ಚು. ಹಾಗಾಗಿ, ಪ್ರಸ್ತುತ ಎಲ್ಲ ಹಂಸ ಪ್ರಭೇದಗಳೂ ಅಲ್ಪ ಸಂಖ್ಯೆಗೆ ಇಳಿದುಹೋಗಿವೆ!

■ ಎನ್. ವಾಸುದೇವ್